# ತವರಿಗೆ ಮರಳಿದ ಗಂಧರ್ವ

**ಹಿಂದೂಸ್ತಾನಿ ಸಂಗೀತದ ಜೈಪುರ ಆತ್ರೌಲಿ ಘರಾಣೆಯ ಮೇರು ಕೊಂಡಿ, ಮನ್ಸೂರ್ ಸಂಗೀತ ಪರಂಪರೆಯ ಹಿರಿಯ ಚೇತನ ರಾಜಶೇಖರ ಮನ್ಸೂರ್ ನಿಧನರಾಗಿದ್ದಾರೆ (ಮೇ 1, 2022). ದೇವರ ದರ್ಶನದಂತೆ 'ರಾಗ ದರ್ಶನ' ಆಗಬೇಕು ಎನ್ನುವುದು ಅವರ ಬಲವಾಗಿ ನಂಬಿಕೆಯಾಗಿತ್ತು.**

■ ಉಮಾ ಅನಂತ್



ಹಿಂದೂಸ್ತಾನಿ ಸಂಗೀತ ಸಾಮ್ರಾಜ್ಯದಲ್ಲಿ ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರೊಂದು ಹೆಮ್ಮರ. ಈ ಹೆಮ್ಮರದ ಕುಡಿ ಕೂಡ ಅಷ್ಟೇ ದೊಡ್ಡ ಹೆಮ್ಮರವಾಗಿ ಬೆಳೆದು, ಇದೀಗ ಕಣ್ಮರೆಗೆ ಸಂದಿದೆ.

ಉತ್ತರಾದಿ ಸಂಗೀತದಲ್ಲಿ ತಂದೆಯ ಹಾದಿಯನ್ನೇ ಅನುಸರಿಸಿ ಪಂ. ರಾಜಶೇಖರ ಮನ್ಸೂರ್ 'ಜೈಪುರ ಅತ್ರೌಲಿ ಘರಾಣೆ'ಯಲ್ಲಿ ವಿಶಿಷ್ಟವಾಗಿ ಹಾಡುತ್ತಿದ್ದ ಕಲಾವಿದರಾಗಿದ್ದರು. ಗಾಯಕ ಮಾತ್ರವಲ್ಲ, ಸಂಗೀತದ ಸಂಪನ್ಮೂಲ ವ್ಯಕ್ತಿ, ಬೋಧಕ, ಮಾರ್ಗದರ್ಶಕ... ಹೀಗೆ ಹಲವು ವಿಶೇಷಣಗಳನ್ನು ಮೈಗೂಡಿಸಿಕೊಂಡಿದ್ದ ಅಪರೂಪದ ಹಾಡುಗಾರರವರು.

ಡಿಸೆಂಬರ್ 16, 1942ರಂದು ಧಾರವಾಡದಲ್ಲಿ ಜನಿಸಿದ ಪಂ. ರಾಜಶೇಖರ ಮನ್ಸೂರ್ ಓದಿದ್ದು ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ಪದವಿ. ಧಾರವಾಡ ವಿಶ್ವವಿದ್ಯಾಲಯದಲ್ಲಿ ಆಂಗ್ಲ ಭಾಷೆಯ ಪ್ರೊಫೆಸರ್ ಆಗಿ ಸುಮಾರು 35 ವರ್ಷ ಸೇವೆ ಸಲ್ಲಿಸಿದವರು. ಇವರಿಗೆ ತಂದೆಯೇ ಸಂಗೀತ ಗುರು, ಮಾರ್ಗದರ್ಶಕ. ಹದಿನಾರನೇ ವಯಸ್ಸಿಗೆ ಮೊದಲ ಸ್ವತಂತ್ರ ಕಛೇರಿ ನೀಡಿದ್ದ ಮನ್ಸೂರ್, 20ರ ಹರೆಯದ ನಂತರ ತಂದೆಯ ಜತೆಗೆ ಸಹಗಾಯನ ನಡೆಸಲಾರಂಭಿಸಿದವರು. ಆಕಾಶವಾಣಿಯ ಟಾಪ್ ಗ್ರೇಡ್ ಕಲಾವಿದರಾಗಿದ್ದ ಅವರು ಆಕಾಶವಾಣಿ,

## ರಾಗಕ್ಕಿಂತಲೂ 'ಗಾಯಕಿ'ಯೇ ಮೇಲು ಎನ್ನುತ್ತಿದ್ದ ಗುರುಗಳು!

ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿರುವ ವಿದುಷಿ ಜಯದೇವಿ ಜಂಗಮಶೆಟ್ಟಿ ಅವರು ಪಂ. ರಾಜಶೇಖರ ಮನ್ಸೂರ ಅವರ ಶಿಷ್ಯೆ. ತನ್ನ ಗುರುವಿನ ವ್ಯಕ್ತಿತ್ವದ ನೆನಪುಗಳನ್ನು ಅವರು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.

◆ **ಪಂ. ರಾಜಶೇಖರ ಮನ್ಸೂರ ಅವರ ಮೆಚ್ಚಿನ ಶಿಷ್ಯೆ ನೀವು. ನಿಮ್ಮಿಬ್ಬರ ನಡುವಿನ ಗುರು–ಶಿಷ್ಯ ಸಂಬಂಧ ಹೇಗಿತ್ತು?**

ನನ್ನ ಗುರುಗಳಾದ ಪಂ. ರಾಜಶೇಖರ ಮನ್ಸೂರ್ ಸರ್ ಅವರು ಮಿತಭಾಷಿ. ಆರಂಭದಲ್ಲಿ ಸಂಗೀತ ಕಲಿಕೆಗೆ ಅಗತ್ಯವಾದಷ್ಟು ಮಾತ್ರ ಮಾತನಾಡುತ್ತಿದ್ದರು. ಹಾಗಾಗಿ ನಾನೂ ಮೌನಭಾಷೆಯಲ್ಲಿಯೇ ಸಂಗೀತ ಪಾಠಗಳನ್ನು ಗ್ರಹಿಸುತ್ತಿದ್ದೆ. ಮೊದಲ ದಿನ ಮನ್ಸೂರ ಸರ್ ಅವರಲ್ಲಿ ಸಂಗೀತ ಕಲಿಯುವ ನನ್ನ ಅಪೇಕ್ಷೆಯನ್ನು ವ್ಯಕ್ತಪಡಿಸಿದಾಗ ಗಂಭೀರವಾಗಿ ಒಂದು ಪ್ರಶ್ನೆ ಕೇಳಿದ್ದರು: ನೀನು ನನ್ನ ಹತ್ತಿರ ರಾಗಗಳನ್ನು ಕಲಿಯಬೇಕು ಅಂತಿಯೋ? 'ಗಾಯಕಿ' ಕಲಿಯಬೇಕು ಅಂತಿಯೋ? ನಾನು ತಕ್ಷಣ 'ಗಾಯಕಿ ಕಲೀಬೇಕು ಸರ್' ಎಂದೆ. ಅವರು ಮರುಮಾತನಾಡದೆ 'ಆಯಿತು, ಸಂಗೀತ ಕಲಿಯಲು ನಾಳೆಯಿಂದಲೇ ಬಾ' ಎಂದರು. ಆರಂಭದಲ್ಲಿ ವಾರದ ಮೂರು ದಿನಗಳು ಮಾತ್ರ ಸಂಗೀತ ಹೇಳಿಕೊಡಲು ಒಪ್ಪಿಕೊಂಡಿದ್ದ ಗುರುಗಳು ಕೆಲವಾರಗಳ ನಂತರ ಪ್ರತಿದಿನ ಸಂಗೀತ ಪಾಠ ಹೇಳಿಕೊಡಲು ಶುರು ಮಾಡಿದರು. ಅವರು ಭಾಗವಹಿಸುತ್ತಿದ್ದ ಬಹುಪಾಲು ಸಂಗೀತ ಕಛೇರಿಗಳಿಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಹಮ್ಮುಬಿಮ್ಮಿಲ್ಲದೆ ಸಂಗೀತ ಹೇಳಿಕೊಡುತ್ತಿದ್ದರು. ಶಿಸ್ತು ಸಮಯ ಪಾಲನೆಗೆ ಹೆಸರಾಗಿದ್ದರು. ಕಲಿಕೆಯ ಸಂದರ್ಭದಲ್ಲಿ ನಾನು ತಪ್ಪು ಮಾಡಿದಾಗಲೂ ಬೈದಿದ್ದು, ಗದರಿಸಿದ್ದು, ಅಷ್ಟೇ ಏಕೆ ಎತ್ತರದ ದನಿಯಲ್ಲಿ ಮಾತನಾಡಿದ್ದು ನಾನು ಕಂಡೇ ಇಲ್ಲ. ಗುರುಗಳ ಸಂಗೀತದ ಪಾಠಗಳಷ್ಟೇ ಅವರ ಘನವಾದ ವ್ಯಕ್ತಿತ್ವ ನನ್ನ ಮೇಲೆ ಪ್ರಭಾವ ಬೀರಿದೆ.

◆ **ಅವರ ಸಂಗೀತ ಕಲಿಕೆಯ ಶಿಸ್ತು ಸಂಗೀತ ವಲಯದಲ್ಲಿ ಬಹಳ ಹೆಸರಾಗಿತ್ತು. ನಿಮ್ಮ ಅನುಭವ ಏನು?**

ಪಾಠ ಹೇಳಿಕೊಡುವಾಗ ತಮ್ಮ ತಂದೆ ಗುರುಗಳಾದ ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಅವರೊಂದಿಗಿನ ಅನುಭವ ಕಥಾನಕಗಳನ್ನು ರಸವತ್ತಾಗಿ ವಿವರಿಸುತ್ತಿದ್ದರು. ಜೈಪುರ ಅತ್ರೌಲಿ